

# ಫ್ಯಾಷನ್ ಫೋಟೊಗ್ರಫಿ; ನಿಶಾಂತ್ ಕೌಶಲ

**ವೃತ್ತಿಯಲ್ಲಿ ಎಂಜಿನಿಯರ್ ಆಗಿರುವ ನಿಶಾಂತ್ ಕೃಷ್ಣ ಅವರಿಗೆ ಫ್ಯಾಷನ್ ಫೋಟೊಗ್ರಫಿ ಒಂದು ಹವ್ಯಾಸ. ವೃತ್ತಿಯ ಜತೆಗೆ ಪ್ರವೃತ್ತಿಯನ್ನೂ ಪ್ರೀತಿಸುವ ನಿಶಾಂತ್ ಇದೀಗ 'ಫ್ಯಾಷನ್ ಫೋಟೊಗ್ರಫಿ'ಯಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ.**

**■ ಕೃಷ್ಣವೇಣಿ ಪ್ರಸಾದ್ ಮುಳಿಯ**

ಫ್ಯಾಷನ್ ಷೋಗಳಲ್ಲಿ ಮಾಡೆಲ್‌ಗಳು ಕ್ಯಾಟ್ ವಾಕ್ ಮಾಡುವಾಗ ನೂರಾರು ಕಣ್ಣುಗಳು ಮಾಡೆಲ್‌ಗಳ ಬೆಕ್ಕಿನ ನಡಿಗೆ, ಹಾವಭಾವ, ಮುಖಚರ್ಯೆ, ಅಭಿನಯ ಹಾಗೂ ತೊಟ್ಟ ಉಡುಪಿನ ಮೇಲಿರುತ್ತದೆ. ಫ್ಯಾಷನ್ ಶೋದಲ್ಲಿ ಕ್ಯಾಟ್‌ವಾಕ್ ಮಾಡುವ ಕಲೆಯನ್ನು ಛಾಯಾಗ್ರಹಣ ಮಾಡಿ ದಾಖಲಿಸುವುದು ಒಂದು ಕಲೆ. ಇದಕ್ಕೆ ಅಸಾಧಾರಣ ಕೈಚಳಕ ಬೇಕು. ಈ ಕಲೆಯನ್ನು ಸಿದ್ಧಿಸಿಕೊಂಡವರು ಹವ್ಯಾಸಿ ಛಾಯಾಗ್ರಾಹಕನಾಗಿರುವ ಯುವ ಎಂಜಿನಿಯರ್ ದಕ್ಷಿಣ ಕನ್ನಡದ ಪುತ್ತೂರಿನ ನಿಶಾಂತ್‌ಕೃಷ್ಣ ಭಟ್.

ಮನಸ್ಸಿಗೆ ಖುಷಿಯೆನಿಸಿ ಸಂತಸ ಬಂದಾಗ ಇನ್ನೂ ಕಲಿಯಬೇಕು, ಸಾಧನೆ ಮಾಡಬೇಕು, ಏನಾದರೂ ಹೊಸತನ್ನು ಸಾಧಿಸಬೇಕು ಅನ್ನೋ ಚೈತನ್ಯ ಬರುತ್ತದೆ. ನಮ್ಮ ಜೀವನದಲ್ಲಿ ಓದು ಮುಖ್ಯ, ಆದರೆ ಓದು ಮಾತ್ರ ಮುಖ್ಯವಲ್ಲ. ಅದರೊಂದಿಗೆ ಇತರ ಕೆಲವು ಹವ್ಯಾಸಗಳನ್ನು ಅಳವಡಿಸಿಕೊಳ್ಳಬೇಕು. ಏಕೆಂದರೆ ಜೀವನ ನಾವು ಹೇಳಿದಂತೆ ಇರುವುದಿಲ್ಲ. ಒಂದು ಕೆಲಸ ಇಲ್ಲಾಂದರೆ ಇನ್ನೊಂದು ಕೆಲಸ, ಇಲ್ಲಾ ಯಾವುದಾದರೂ ವ್ಯವಹಾರ.. ಹೀಗೆ ಜೀವನಕ್ಕೆ ಆಧಾರವಾಗುವ ಹವ್ಯಾಸವಾದರೆ ಇನ್ನೂ ಉತ್ತಮ. ಇಂದು ಕಲೆಗಳಿಗೂ ಅತ್ಯಂತ ಬೆಲೆ, ಸ್ಥಾನ ಇದೆ. ಸಮಾಜದಲ್ಲಿ ಕಲೆಗಳಿಂದಾಗಿ ನಮ್ಮನ್ನು ನಾವು ಗುರುತಿಸಿಕೊಳ್ಳಬಹುದು!

ಚಿತ್ರ: ನಿಶಾಂತ್‌ಕೃಷ್ಣ